# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎ : 0816-2255650, 2273511 ಫ್ಯಾಕ್ಸ್ :0816-2270719

ಸಂಖ್ಯೆ:ತುವಿ: ಪ.ವಿ:ಯು.ಜಿ.:ಪ.ಶುಲ್ಕ.:2016-17 : 1562 ದಿನಾಂಕ: 14.03.2017

## ಅಧಿಸೂಚನೆ

ವಿಷಯ: 2017 ರ ಏಪ್ರಿಲ್/ಮೇ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಸೆಮಿಸ್ಟರ್‌ಗಳು(CBCS & Non-CBCS) ಮತ್ತು ವಾರ್ಷಿಕ ಪದ್ಧತಿಯ ಬಿ.ಎ/ಬಿ.ಕಾಂ. ಪದವಿಗಳಿಗೆ ಸಂಬಂಧಿಸಿದಂತೆ 2005-06 ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ ಪ್ರವೇಶ ಪಡೆದಿರುವ (Double the Duration of the Course ಪೂರೈಸಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳನ್ನೊಳಗೊಂಡಂತೆ)ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 13.03.2017

*****

2016-17 ನೇ ಶೈಕ್ಷಣಿಕ ಸಾಲಿನ 2017 ರ ಏಪ್ರಿಲ್/ಮೇ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಸೆಮಿಸ್ಟರ್ ಪದ್ಧತಿಯ ಪರೀಕ್ಷೆಗಳಾದ ಬಿ.ಎ./ಬಿ.ಎಸ್.ಡಬ್ಲ್ಯು./ಬಿ.ಎಸ್ಸಿ./ಬಿ.ಸಿ.ಎ./ಬಿ.ಕಾಂ./ಬಿ.ಬಿ.ಎಂ./ B.VOC, in HARDWARE TECHNOLOGY & NETWORKING ಪದವಿಗಳ II, IV & VI ನೇ ಸೆಮಿಸ್ಟರ್, ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಪದವಿಯ VI, VIII & X ನೇ ಸೆಮಿಸ್ಟರ್, ಬಿ.ಎಫ್.ಎ. ಪದವಿಯ II, IV, VI, VIII & X ನೇ ಸೆಮಿಸ್ಟರ್ ಮತ್ತು ವಾರ್ಷಿಕ ಪದ್ಧತಿಯ ಬಿ.ಎ./ಬಿ.ಕಾಂ. ಪದವಿಗಳ (ಪೂರಕ) I, II & III ನೇ ವರ್ಷಕ್ಕೆ ಸಂಬಂಧಿಸಿದಂತೆ 2005-06 ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ ಪ್ರವೇಶ ಪಡೆದಿರುವ (Double the Duration of the Course ಪೂರೈಸಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳನ್ನೊಳಗೊಂಡಂತೆ) ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಶುಲ್ಕದ ವಿವರಗಳನ್ನು ವಿಷಯದೊಂದಿಗೆ ಆನ್‌ಲೈನ್‌ನಲ್ಲಿ ನಮೂದಿಸುವುದು.

ಆನ್‌ಲೈನ್ ಪರೀಕ್ಷಾ ಅರ್ಜಿಗಳ ಆಧಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಿದ್ದು, ಪ್ರತ್ಯೇಕವಾಗಿ ಪ್ರಶ್ನೆ ಪತ್ರಿಕೆ ಕೋರಿಕೆ ಪಟ್ಟಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ವಿಷಯಗಳಿಗೆ/ಪತ್ರಿಕೆಗಳಿಗೆ ಕೋಡ್‌ಗಳನ್ನು ಪರಿಶೀಲಿಸಿ ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿಷಯ/ಪತ್ರಿಕೆಗಳ ಕೋಡ್‌ನ್ನು ತಪ್ಪಾಗಿ ನಮೂದಿಸಿದಲ್ಲಿ ಈ ಕಾರಣದಿಂದಾಗಿ ಪ್ರಶ್ನೆ ಪತ್ರಿಕೆಯಲ್ಲಿನ ಸರಬರಾಜು ಮಾಡುವುದರಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

## ಗಮನಿಸಬೇಕಾದ ದಿನಾಂಕಗಳು

| | | |
|---|---|---|
| 1. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 28.03.2017 |
| 2. | ವಿದ್ಯಾರ್ಥಿಗಳಿಗೆ ರೂ ೧೦೦/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 03.04.2017 |
| 3. | ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ | 06.04.2017 |
| 4. | ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 07.04.2017 |

(...2)

14/3/17

| ನಿಗದಿಪಡಿಸಿರುವ ಶುಲ್ಕದ ವಿವರಗಳು (CBCS & Non-CBCS) | | | | |
|---|---|---|---|---|
| ಕ್ರ.ಸಂ | ಸೆಮಿಸ್ಟರ್/ವಾರ್ಷಿಕ | ಕೋರ್ಸ್ | ನವೀನ | ಪೂರಕ (ಒಂದು ವಿಷಯಕ್ಕೆ) |
| 1. | II,IV & VI | ಬಿ.ಎ./ಬಿ.ಎಸ್.ಡಬ್ಲ್ಯೂ./ಬಿ.ಎಸ್ಸಿ./ಬಿ.ಕಾಂ./ ಬಿ.ಬಿ.ಎಂ./ಬಿ.ಸಿ.ಎ. | ರೂ. 1,000-00 | ರೂ. 100-00 |
| 2. | VI,VIII & X | ಬಿ.ಎ. ಕನ್ನಡ ಪಂಡಿತ್ ಪದವಿ | ರೂ. 1,000-00 | ರೂ. 100-00 |
| 3. | II,IV, VI,VIII &X | ಬಿ.ಎಫ್.ಎ | ರೂ. 1,000-00 | ರೂ. 100-00 |
| 4. | I, II & III ವಾರ್ಷಿಕ | ಬಿ.ಎ./ಬಿ.ಕಾಂ. (ಪುನರಾವರ್ತಿತ) | - | ರೂ. 100-00 |

ಪರೀಕ್ಷಾ ಶುಲ್ಕದಲ್ಲಿ ರಿಯಾಯಿತಿ ಪಡೆದಿರುವ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು.

| ಕ್ರ.ಸಂ | ಇತರೆ ಶುಲ್ಕಗಳ ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಅಂಕಪಟ್ಟಿ ಶುಲ್ಕ( ಪ್ರತಿ ಸೆಮಿಸ್ಟರ್‌ಗೆ) | 150-00 |
| 2. | ಆನ್‌ಲೈನ್ ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 25-00 |
| 3. | ಅರ್ಜಿ ಪರಿಶೀಲನಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 10-00 |
| 4. | ಪರೀಕ್ಷಾ ಸಿದ್ಧತಾ ಶುಲ್ಕ (Process fee) ( ಪ್ರತಿ ಸೆಮಿಸ್ಟರ್‌ಗೆ) | 35-00 |
| 5. | ಪ್ರಾಯೋಗಿಕ ಪರೀಕ್ಷಾ ಶುಲ್ಕ ( ಒಂದು ವಿಷಯಕ್ಕೆ) | 50-00 |
| 6. | ಮೌಖಿಕ ಸಂದರ್ಶನ (UG Viva ) ( ಒಂದು ವಿಷಯಕ್ಕೆ) | 150-00 |
| 7. | ಪ್ರಾಜೆಕ್ಟ್ ವ್ಯಾಲ್ಯೂವೇಷನ್ (UG Project Evaluation ) ( ಒಂದು ವಿಷಯಕ್ಕೆ) | 100-00 |

*ಅರ್ಜಿ ಪರಿಶೀಲನಾ ಶುಲ್ಕ **ರೂ.10-00** ಗಳಲ್ಲಿ ರೂ. 06-00 ಗಳನ್ನು ಪರೀಕ್ಷಾ ಕೇಂದ್ರದಲ್ಲಿ ಉಳಿಸಿಕೊಂಡು ಉಳಿದ ರೂ.04-00 ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದು.

*ಆನ್‌ಲೈನ್ ಅರ್ಜಿ ಶುಲ್ಕ **ರೂ.25-00** ಗಳಲ್ಲಿ ರೂ.05-00ಗಳನ್ನು ಕಾಲೇಜಿನವರು ಉಳಿಸಿಕೊಂಡು ಉಳಿದ ರೂ.20-00 ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದು.

**ಶುಲ್ಕ ವಿನಾಯಿತಿ**

ಸಂಬಂಧಪಟ್ಟ ಇಲಾಖೆಗಳಿಂದ ಈಗಾಗಲೇ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಪಡೆಯಲು ಅರ್ಹರಿರುತ್ತಾರೆ.

1. **ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ:**

   ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ **ರೂ.2.50** ಲಕ್ಷದೊಳಗಿದ್ದು, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದರೆ ಅಂತಹ ವಿದ್ಯಾರ್ಥಿಗಳಿಂದ ಒತ್ತಾಯ ಪೂರ್ವಕವಾಗಿ ಪರೀಕ್ಷಾ ಶುಲ್ಕವನ್ನು ಪಡೆಯುವಂತಿಲ್ಲ.

2. **ಪ್ರವರ್ಗ – 1, 2ಎ, 2ಬಿ, 3ಎ, 3ಬಿ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ:**

   ಪ್ರವರ್ಗ–1ರ ವಿದ್ಯಾರ್ಥಿಗಳಿಗೆ **ರೂ.2.50** ಲಕ್ಷ, ಇತರೆ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ, 3ಬಿ ಮತ್ತು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಹಾಗೂ ಇತರೆ ಜನಾಂಗದವರು (ಉದಾ: ಬ್ರಾಹ್ಮಣ, ವೈಶ್ಯ ಇತ್ಯಾದಿ) ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ **ರೂ.1.00** ಲಕ್ಷದೊಳಗಿದ್ದರೆ ಅಂತಹ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ.

(...3)

143

(...3)



3. ಎಲ್ಲಾ ಪುನರಾವರ್ತಿತ ವಿದ್ಯಾರ್ಥಿಗಳು (ಸೂಚಿಸಿದ ಆದಾಯ ಮಿತಿಗೊಳಪಟ್ಟು) ನವೀನ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಪಡೆಯಲು ಅರ್ಹರಿರುತ್ತಾರೆ (ಉದಾ: ನಾಲ್ಕನೇ ಸೆಮಿಸ್ಟರ್‌ನಲ್ಲಿ ನವೀನರಾಗಿದ್ದು ದ್ವಿತೀಯ ಸೆಮಿಸ್ಟರ್‌ನಲ್ಲಿ ಪುನರಾವರ್ತಿತರಾದಲ್ಲಿ(Repeater) ನಾಲ್ಕನೇ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಪಡೆಯಲು ಅರ್ಹರಿದ್ದು ಪುನರಾವರ್ತಿತ(Repeaters exam) ಪರೀಕ್ಷೆಗಳಿಗೆ ಶುಲ್ಕ ವಿನಾಯಿತಿ ಪಡೆಯಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದ ವಿದ್ಯಾರ್ಥಿಗಳು ಅರ್ಹರಾಗಿರುವುದಿಲ್ಲ).

**ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.**

**ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.**

ವಿಶ್ವವಿದ್ಯಾನಿಲಯದಿಂದ ಪ್ರವೇಶ ಅನುಮೋದನೆ ಪಡೆದ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾನಿಲಯದ ಪರವಾಗಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಸಂಗ್ರಹಿಸಿ, ನಂತರ ಒಟ್ಟು ಶುಲ್ಕವನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ನಿಧಿಗೆ **RTGS/NEFT ಮೂಲಕ ಎಸ್.ಬಿ.ಎಂ. ಖಾತೆ ನಂ.54040241380 ಗೆ ಪರೀಕ್ಷಾ ಶುಲ್ಕವನ್ನು ದಿನಾಂಕ** 07.04.2017 **ರೊಳಗೆ ಪಾವತಿಸಿ ಮತ್ತು** ಪರೀಕ್ಷಾ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ (ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನಕಲು ಪ್ರತಿ) ಪ್ರಾಂಶುಪಾಲರು ದೃಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು. **ಪರೀಕ್ಷಾ ಶುಲ್ಕದ ಹಣಕಾಸು ಪಟ್ಟಿಯನ್ನು ದ್ವಿಪ್ರತಿಗಳಲ್ಲಿ. (ಪರೀಕ್ಷಾಂಗ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಒಂದು ಪ್ರತಿಯನ್ನು ತಪ್ಪದೇ ಸಲ್ಲಿಸುವುದು).**

ಪ್ರಾಯೋಗಿಕ ಪರೀಕ್ಷೆಗಳನ್ನು ಸೈದ್ಧಾಂತಿಕ ಪರೀಕ್ಷೆಗಳಿಗಿಂತ ಮೊದಲು ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಪರೀಕ್ಷಾ ಅಧೀಕ್ಷಕರು/ಪ್ರಾಂಶುಪಾಲರುಗಳು ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು.

ಸೈದ್ಧಾಂತಿಕ (ಪಠ್ಯ ವಿಷಯ - Theory) ಪರೀಕ್ಷೆಗಳ ವಿವರಗಳನ್ನೊಳಗೊಂಡ ವೇಳಾಪಟ್ಟಿಯನ್ನು ಮುಂದೆ ತಿಳಿಸಲಾಗುವುದು.

**ಆಂತರಿಕ ಅಂಕಗಳನ್ನು ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ:** 05.05.2017. ಆಂತರಿಕ ಅಂಕಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಮೊದಲು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ ನಂತರ **ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರ ಹೆಸರಿಗೆ **ದಿನಾಂಕ:** 06.05.2017 ರೊಳಗೆ ಪರೀಕ್ಷಾಂಗ ವಿಭಾಗದ ಟಪಾಲ್(Despatch)ನಲ್ಲಿ ಸಲ್ಲಿಸತಕ್ಕದ್ದು. **ಒಂದು ಬಾರಿ ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ತಿದ್ದುಪಡಿ ಮಾಡುವುದಿಲ್ಲ** ಎಂಬ ಅಂಶವನ್ನು ಗಮನಿಸುವುದು. ವಿಳಂಬವಾದಲ್ಲಿ ದಿನವೊಂದಕ್ಕೆ ರೂ. 1,000/- ಗಳಂತೆ ಗರಿಷ್ಠ ರೂ. 10,000-00 (ಹತ್ತು ದಿನಗಳು) ಗಳ ದಂಡಶುಲ್ಕದೊಂದಿಗೆ ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವುದು. ಸೆಮಿಸ್ಟರ್‌ವಾರು ಆಂತರಿಕ ಅಂಕಗಳನ್ನು ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಅಂಗೀಕರಿಸಲಾಗುವುದಿಲ್ಲ ನಂತರ ಆಗುವ ತಪ್ಪುಗಳಿಗೆ ಪ್ರಾಂಶುಪಾಲರುಗಳೇ ಜವಾಬ್ದಾರರಾಗಿರುತ್ತಾರೆ.

**ವಿಶ್ವವಿದ್ಯಾನಿಲಯದ ನಿಯಮಾನುಸಾರ ವಿದ್ಯಾರ್ಥಿಯು ಸ್ನಾತಕ ಪದವಿಗೆ ಪ್ರವೇಶ ಪಡೆದ ವರ್ಷದಿಂದ ಆರು ಶೈಕ್ಷಣಿಕ ವರ್ಷಗಳೊಳಗೆ ಪದವಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.**

ಎಲ್ಲಾ ಪ್ರಾಂಶುಪಾಲರುಗಳು ಸಹಕರಿಸಬೇಕಾಗಿ ಕೋರಲಾಗಿದೆ.

14/3

(...4)

ಆನ್‌ಲೈನ್‌ನಲ್ಲಿ ನಮೂದಿಸುವಾಗ ಏನಾದರೂ ಸಮಸ್ಯೆ ಉಂಟಾದಲ್ಲಿ ಹೆಚ್ಚಿನ ಮಾಹಿತಿಗಾಗಿ ಗಣಕಯಂತ್ರ ವಿಭಾಗದವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. (ಮೊಬೈಲ್ ಸಂಖ್ಯೆ: 7624853485)

ಸೂಚನೆ: ಸಂಬಂಧಪಟ್ಟ ಇಲಾಖೆಗಳಿಂದ ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಶುಲ್ಕದ ಮರುಭರ್ತಿಕೆ ಹಣ ಬಂದ ತಕ್ಷಣ ವಿಶ್ವವಿದ್ಯಾನಿಲಯದ ಖಾತೆಗೆ ಪಾವತಿಸಿ ಮಾಹಿತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವುದು.

14/3/17

ಕುಲಸಚಿವರು(ಮೌಲ್ಯಮಾಪನ)

ಗೆ,

ಪ್ರಾಂಶುಪಾಲರು, ಘಟಕ ಕಾಲೇಜುಗಳು ಹಾಗೂ ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಉಪಕುಲಸಚಿವರು(ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ವಿಶ್ವವಿದ್ಯಾನಿಲಯದ ಅಂತರ್ಜಾಲ (Website) ದಲ್ಲಿ ಇಂದೇ ಪ್ರಕಟಿಸುವುದು.
8. ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಕಛೇರಿ ಪ್ರತಿ.